ಸ್ ೧೯೦೭ನೆ ಇಸವಿಯ ಮೈಸೂರು ದಸರಾ ಪ್ರಯುಕ್ತವಾದ ಕೈಗಾರಿಕೆ ಮತ್ತು ವ್ಯವಸಾಯದ ಪ್ರದರ್ಶನ.

ಪ್ರದರ್ಶನದ ಪ್ರಾರಂಭ ಮತ್ತು ಪ್ರವೇಶದ ರುಸುಂ ಮೊದಲಾದವುಗಳ ಕುರಿತು ಇದರಡಿ ಕಂಡ ವಿವರಗಳು ಜನಗಳ ಜಾಹೀರ್ ಬಗ್ಗೆ ಮಾಡಲ್ಪಟ್ಟವೆ :—

1. ಸ್ ೧೯೦೭ನೆ ಇಸವಿ ಅಕ್ಟೋಬರ್ 5ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಗೆ ಪ್ರದರ್ಶನವನ್ನು ಪ್ರಾರಂಭಿಸಲು ಶ್ರೀಮನ್ ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ.

2. ಪ್ರದರ್ಶನ ಪ್ರಾರಂಭದ ಉತ್ಸವಕ್ಕೋಸ್ಕರ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಡುವವು.

3. 5ನೆ ತಾರೀಖಿನ ಪ್ರಾತಃಕಾಲದಲ್ಲಿ ಕರಿಯಲ್ಪಟ್ಟವರ ವಿನಹಾ ಇತರರಿಗೆ ಪ್ರದರ್ಶನಕ್ಕೆ ಬಿಡಲ್ಪಡುವದಿಲ್ಲ.

4. ಪ್ರದರ್ಶನ ಶಾಲೆಯು ಇದರ ಕೆಳಗೆ ನಮೂದಿಸುವ ಪ್ರಕಾರ ಜನಗಳಿಗೋಸ್ಕರ ತೆಗಿಯಲ್ಪಡುವುದು :—

ದಿನಗಳು.	ಕಾಲ.			
ದೊಡ್ಡ ಮನುಷ್ಯರಿಗೂ ಮತ್ತು ಸ್ತ್ರೀಯರಿಗೂ—		ಇಂದ.		ಗೆ.
ಅಕ್ಟೋಬರ್ 5ನೆ ತಾರೀಖು.				
ಡಿಟೋ 6ರಿಂದ 16ರ ವರಿಗೆ (ಉಭಯ ದಿನಗಳು ಸೇರಿ)	ಸಾಯಂಕಾಲ	5		8
	ಪ್ರಾತಃ	7½		11½
ಡಿಟೋ 17 ವ 18 ..				
ಡಿಟೋ 21 ರಿಂದ 31ರ ವರಿಗೆ (ಉಭಯ ದಿನಗಳು ಸೇರಿ)	ಪ್ರಾತಃ	11	ಸಾಯಂಕಾಲ	8
ಸ್ತ್ರೀಯರಿಗೆ ಮಾತ್ರ—				
ಅಕ್ಟೋಬರ್ 7, 11 ಮತ್ತು 19 ಡಿಟೋ 27	ಸಾಯಂಕಾಲ	4		8
	ಪ್ರಾತಃ	7		10
ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಮಾತ್ರ (ರುಸುಂ ಇಲ್ಲದೆ)— ಅಕ್ಟೋಬರ್ 20	ಸಾಯಂಕಾಲ	2		8

5. ಅಕ್ಟೋಬರ್ 17ರಿಂದ 20ರ ವರಿಗೆ (ಉಭಯ ದಿನಗಳಲ್ಲಿ) ಪ್ರದರ್ಶನಶಾಲೆಯಲ್ಲಿ ಪ್ರಾತಃಕಾಲ 8 ರಿಂದ 9½ ಘಂಟೆ ವರಿಗೆ ಉಪನ್ಯಾಸಗಳಿಗೋಸ್ಕರ ವಿವರ್ಪಾಡುಗಳು ಮಾಡಲ್ಪಡುವವು. ಉಪನ್ಯಾಸಗಳ ವಿಷಯಗಳು ಮುಂದೆ ಪ್ರಸಿದ್ಧ ಪತ್ರಿಕೆಗಳಿಂದ ತಿಳಿಸಲ್ಪಡುವವು. ಉಪನ್ಯಾಸಗಳಿಗೋಸ್ಕರ ರುಸುಂ ಮನ್ನಾ ಮಾಡಲ್ಪಡುವದು. ಉಪನ್ಯಾಸಗಳು ನಡೆಯುವ ಕಾಲದಲ್ಲಿ ಪ್ರದರ್ಶನ ಶಾಲೆಯು ಮುಚ್ಚಲ್ಪಡುವುದು.

6. ದರ್ಶನಕ್ಕೆ ಬರುವ ವಿಶೇಷತರವಾದವರಿಗೋಸ್ಕರ ಮೇಲೆ ನಮೂದಿಸಲ್ಪಡದ ಘಂಟೆಗಳಲ್ಲಿ ಪ್ರದರ್ಶನಶಾಲೆಯು ತೆಗೆಯಲು ವಿವರ್ಪಾಡುಗಳು ಮಾಡಲ್ಪಡುವವು.

7. ಪ್ರದರ್ಶನಶಾಲೆಗೆ ಬರಲು ಇವರಡಿ ಕಂಡ ರುಸುಂಗಳು ವಸೂಲು ಮಾಡಲ್ಪಡುವವು :—

ವಿವರ.	ರುಸುಂಗಳು. ರೂ. ಆ. ಪೈ.	
(a) ಪ್ರತಿ ಒಬ್ಬರಿಗೂ	0 4 0	ಪ್ರತಿ ಸಲಕ್ಕೂ
(b) 5 ಜನಗಳು ಮಿಗರದ ಕುಟುಂಬಕ್ಕೆ ಕೊಡುವ ಟಿಕೆಟ್ಟುಗಳು...	0 12 0	
(c) 5 ಜನಗಳಿಗಿಂತ ಹೆಚ್ಚಾದ ಕುಟುಂಬಕ್ಕೆ ...	0 2 0	ಜಾಸ್ತಿ ಪ್ರತಿ ಒಬ್ಬರಿಗೂ.
(d) ಪಾಠಶಾಲೆಯ ವಿದ್ಯಾರ್ಥಿಗಳಿಗೆ ...	0 2 0	ಅಥವಾ ಅರ್ಧ ಚಾರ್ಜ.
(e) ಪ್ರದರ್ಶನ ನಡೆಯುವ ಪೂರ್ತಿ ಕಾಲದಲ್ಲಿ ಪ್ರತಿ ಒಬ್ಬರಿಗೂ ತಕ್ತಾಲದ ಟಿಕೆಟ್ಟು.	3 0 0	

ಬಳಕ್ಕೆ — ಬರುವಾಗ ಗೇಟಿನಲ್ಲಿ ಟಿಕೆಟ್ಟುಗಳು ತೆಗೆದುಕೊಳ್ಳಲ್ಪಡುವವು.

ಟಿಕೆಟ್ಟುಗಳು ಕೊಡಲು ಮತ್ತು ರುಸುಂಗಳನ್ನು ವಸೂಲು ಮಾಡಲು ಮೈಸೂರಲ್ಲಿರುವ ಕಾಲೇಜುಗಳ ಪ್ರಿನ್ಸಿಪಲ್ಲರಿಗೂ ಮತ್ತು ಪಾಠಶಾಲೆಗಳ ಹೆಡ್ ಮ್ಯಾಸ್ಟರುಗಳಿಗೂ ಕಳುಹಿಸಲ್ಪಡುವವು. ಪ್ರದರ್ಶನಕಾಲದಲ್ಲಿ ಮೈಸೂರಿಗೆ ಇತರ ಸ್ಥಳಗಳಿಂದ ಬಂದಿರುವ ವಿದ್ಯಾರ್ಥಿಗಳು ಮೈಸೂರಲ್ಲಿರುವ ಹೆಡ್ ಮ್ಯಾಸ್ಟರುಗಳಿಂದ ಮೇಲ್ಕಂಡ ದರಗಳಂತೆ ಟಿಕೆಟ್ಟುಗಳನ್ನು ಹೊಂದಬಹುದು.

8. ಪ್ರದರ್ಶನಕ್ಕೆ ವಸ್ತುಗಳನ್ನು ತರುವ ಪ್ರತಿ ಒಬ್ಬರಿಗೂ ಅಥವಾ ಅವರ ಮುತಾಲೀಕ ಯಾ ಆಳಿಗೂ ಮತ್ತು ಕೆಲಸದ ಮೇಲಿರುವ ಜನಗಳಿಗೂ ಮುಫತ್ತು ರಹದಾರಿಯು ಕೊಡಲ್ಪಡುವುದು.

9. ತಮ್ಮನ್ನು ಕಳುಹಿಸಿದ ಡೆಪ್ಯುಟಿ ಕಮೀಷನರ ಸರ್ಟಿಫಿಕೇಟಿನ ಮೇಲೆ ರುಸುಂ ಕೊಡಲು ಶಕ್ತಿಯಿಲ್ಲದ ರೈತರಿಗೂ ಮತ್ತು ಕೈಗಾರಿಕೆ ಕೆಲಸದವರಿಗೂ ಮುಫತ್ತು ರಹದಾರಿಗಳು ಕೊಡಲ್ಪಡುವವು.

10. ಹೋಗಿ ಬರಲು ರೈಲ್ವೆ ಚಾರ್ಜು ಕೊಡಲಿಕ್ಕೆ ಬಹಳ ಬಡವರಾದ ಆದರೆ ಪ್ರದರ್ಶನಕ್ಕೆ ಬರೋಣದರಿಂದ ಫಲಿತಾಂಶ ಹೊಂದುವ ವಿವೇಚನೆಯುಳ್ಳವರಾದ ರೈತರು ಮತ್ತು ಕೈಗಾರಿಕೆ ಕೆಲಸದವರ ವಿಷಯದಲ್ಲಿ ಡೆಪ್ಯುಟಿ ಕಮೀಷನರವರು ಅಂಥಾ ಚಾರ್ಜು ಕೊಡಲು ಶಿಫಾರಸು ಸಹಾ ಮಾಡಬಹುದು. ಕಮಿಟಿಯವರು ಅಂಥಾ ಚಾರ್ಜನ್ನು ವಹಿಸುವರು. ಸಂದರ್ಭಾನುಸಾರ, ಈ ರಿಯಾಯಿತಿಯನ್ನು ತೋರಿಸತಕ್ಕದ್ದು. ಸದರೀ ರೈತರು ಮತ್ತು ಕೈಗಾರಿಕೆಯವರು ತಮ್ಮ ಭೋಜನಕ್ಕೂ ಮತ್ತು ವಾಸಸತಕ್ಕ ವಿವರ್ಪಾಡುಗಳನ್ನು ಅವರೆ ಮಾಡಿಕೊಳ್ಳತಕ್ಕದ್ದು.

11. ಸ್ ೧೯೦೭ನೆ ಇಸವಿ ಅಕ್ಟೋಬರ್ 1ರ ಲಾಗಾಯಿತ್ತು ಪ್ರದರ್ಶನ ಪ್ರದೇಶದ ಸವಿಾಪದಲ್ಲಿ ವಸ್ತು ಪ್ರದರ್ಶಕರ ಉಪಯೋಗಕ್ಕೋಸ್ಕರ ಒಂದು ಹೋಟಲನ್ನು ಸರ್ಕಾರಿ ಅಲ್ಲದ ಇತರರಿಂದ ಇಡಿಸಲು ಕಮಿಟಿಯವರು ವಿವರ್ಪಡಿಸುವರು.

12. ಮೇಲ್ಕಂಡ ಅಂಶಗಳಲ್ಲಿ ಬದಲಾವಣೆಗಳನ್ನು ಹೆಚ್ಚು ಅಂಶಗಳನ್ನು ಅಥವಾ ವಿಶೇಷ ವಿವರ್ಪಾಡುಗಳನ್ನು ಮಾಡತಕ್ಕ ವಿಷಯದಲ್ಲಿ ನೋಟಿಸು ಮತ್ತು ಪ್ರಸಿದ್ಧ ಪತ್ರಿಕೆಯ ಮುಖಾಂತರ ತಿಳಿಸಲ್ಪಡುವವು.

ಕೆ. ಸುಬ್ಬರಾವ್, ಸೆಕ್ರಿಟರಿ.